Strength of Primary Schools and Students in Dharwad District.

487 SRI BHAVU RAO DESHPANDE (Dharwad).—Will the Minister of State for Primary and Secondary Education be pleased to state :—

(a) the No. of primary schools in Dharwad District;

(b) the No. of students in these primary schools;

(c) the No. of teachers teaching in these schools;

(d) whether the No. of teachers is proportionate to the No. of students ?

SMT. NAGAMMA C. KESHAVA MURTHY (Minister of State for Primary and Secondary Education).—

(a) 1,962.

(b) 3,82,357.

(c) 8,443.

(d) No.

REPRESENTATIONS BY MEMBERS

re : *Assault on an M.L.A. at Rajajinagar Police Station.*

ಶ್ರೀ ಎಸ್. ಎಂ. ವೀರನಾಳ ಚಿಂದ್ರಶೇಖರ್.—ಅಧ್ಯಕ್ಷರೆ,ನೆನ್ನೆಯ ದಿವಸ ರಾತ್ರಿ ರಾಜಾಜಿನಗರ ವಿಧಿಯಾದಲ್ಲಿ ನಮ್ಮ ಪಕ್ಷಾನ ಸದಸ್ಯರಲ್ಲಿ ಒಬ್ಬರನ್ನು ಪೋಲೀಸಿನವರು ಮಾನಸಿಗೆ ಬಂದ ಹಾಗೆ ಹೊಡೆದಿದ್ದಾರೆ. ಈಗ ಅವರು ಆಸ್ಪತ್ರೆಯಲ್ಲಿದ್ದಾರೆಂದು ಕೇಳಿಬಂತು. ಇದು ಬಹಳ ದುಃಖಕರವಾದ ವಿಷಯ. ಇವರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ ಎಂದು ತಿಳಿದುಕೊಳ್ಳಬೇಕಾಗಿದೆ.

ಶ್ರೀ ಜಿ. ಬಸವಣ್ಣಪ್ಪ.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವೆಂಕಟೇಶಪ್ಪನವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಧಾರುಣ ಸ್ಥಿತಿಯಲ್ಲಿದ್ದಾರೆ. ರಾಜಾಜಿನಗರದ ವಿಧಿಯಾನಲ್ಲಿ ಪೋಲೀಸರು ಅವರಿಗೆ ಅಮಾನುಷವಾಗಿ ಮಾರ್ ಹ್ಯಾಂಬರ್ ಮಾಡಿದ್ದಾರೆ ಮಾನ್ಯ ಸದಸ್ಯರು ಇರತಕ್ಕ ಪರಿಸ್ಥಿತಿಯನ್ನು ಯಾರು ನೋಡಿದರೂ ಕಣ್ಣೀರು ಬರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಭೇಟಿ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪ್ರತಿನಿತ್ಯ ಈ ರೀತಿ ನಡೆಯುವುದು ಕಂಡುಬರುತ್ತಿದೆ. ಇದು ಒಳ್ಳೆಯ ದಲ್ಲ. ಇವ್ಯಾವತ್ತು ಶಾಶ್ವತವಾಗಿ ಮೇಲೆ ಕೈ ಮಾಡಿದವರು. ನಾಳೆ ಮಂತ್ರಿಗಳ ಮೇಲೆ ಕೈ ಮಾಡುವುದಕ್ಕೆ ಹಿಂದೆ ಬೀಳುವುದಿಲ್ಲ. ಇದು ಯಾರಿಗೂ ಒಳ್ಳೆಯ ಹೆಸರನ್ನು ತರುವುದಿಲ್ಲ. ಈ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಪಕ್ಷಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಇದು ಬಹಳ ಗಂಭೀರವಾದ ಪ್ರಶ್ನೆ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಮಾನ್ಯ ಸದಸ್ಯರಾದ ವೆಂಕಟೇಶಪ್ಪನವರಿಗೆ ಸೂಕ್ತ ರಕ್ಷಣೆ ಯನ್ನು, ಸೂಕ್ತ ವ್ಯವಸ್ಥೆಯನ್ನು ಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಸದಸ್ಯರಾದ ವೆಂಕಟೇರಪ್ಪ ನವರು ತಮ್ಮ ಐಡೆಂಟಿಫಿಕೇಷನ್ ಕೊಟ್ಟಿದ್ದರೂ ಸಹ ಪೋಲೀಸ್ ಅಧಿಕಾರಿಗಳು ವಿಧಾನಸೌಧದಲ್ಲಿ ಮಾತನಾಡಿ ಕೆಟ್ಟ, ಕೆಟ್ಟ ಮಾತುಗಳನ್ನಾಡಿದ್ದಾರೆ. ಆದ್ದರಿಂದ ಯಾವ ಪೋಲೀಸ್ ಅಧಿಕಾರಿಗಳು ಈ ರೀತಿ ಮಾಡಿದ್ದಾರೆ ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಬಿ. ಪಾಟೀಲ್.—ಅಧ್ಯಕ್ಷರೆ, ನಮ್ಮ ಬಿಜಾಪುರ ಜಿಲ್ಲೆಯಲ್ಲಿ.....

ಅಧ್ಯಕ್ಷರು.—ಈ ವಿಷಯ ಮುಗಿಯ ಮೇಲೆ ತಮಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.